ಪ್ರಶ್ನೆ ೭೬೦. ಶ್ರೀ ಬಿ.ಹೆಚ್. ಯಂಕನಾಯಕ್—ಸದಸ್ಯರು ಗೈರು ಹಾಜರು. ಶ್ರೀ ಧರ್ಮ ಸಿಂಗ್–ಸದಸ್ಯರು ಗೈರುಹಾಜರು.

ಸೌಂದತ್ತಿಯಲ್ಲಿ ವಸತಿ ಗೃಹ ನಿರ್ಮಾಣ

೭೫೫. ಶ್ರೀ ಚಂದ್ರಶೇಖರ್ ಮಾಮನಿ (ಪರಸಗಡ).—ಮಾನ್ಯ ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಸೌಂದತ್ತಿಯ ಶ್ರೀ ಎಲ್ಲಮ್ಮ ಕ್ಷೇತ್ರದ ಬಳಿ 'ಯಾತ್ರಿಕ' ಎಂಬ ವಸತಿ ಗೃಹವನ್ನು ಕಟ್ಟಲು ಸರ್ಕಾರವು ಯೋಚಿಸಿರುವುದು ನಿಜವೇ.

ಆ) ಹಾಗಿದ್ದಲ್ಲಿ, ಕಟ್ಟಡದ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು).—

ಅ) ಬೆಳಗಾವಿ ಜಿಲ್ಲೆಯ ಸವದತ್ತಿಯ ಶ್ರೀ ಎಲ್ಲಮ್ಮ ಕ್ಷೇತ್ರದಲ್ಲಿ ಯಾತ್ರಿಕ ವಸತಿ ಗೃಹವನ್ನು ಕಟ್ಟುವ ವಿಚಾರವು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಕೇಂದ್ರ ಸರ್ಕಾರದಿಂದ ಈ ಯೋಜನೆಗೆ ಒಪ್ಪಿಗೆ ದೊರೆತ ಕೂಡಲೆ ಭಾರತೀಯ ಯಾತ್ರಿ ಅವಾಸ್ ವಿಕಾಸ್ ಸಮಿತಿಯವರು ಈ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳುವುದು.

ಜೈವಿಕ ಅನಿಲ ಘಟಕಗಳ ವಿಫಲತೆ

೫೭೪. ಶ್ರೀ ಸಿ.ಎಂ. ಉದಾಸಿ (ಹಾನಗಲ್).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಚಕ್ಪೋಸ್ಟ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜೈವಿಕ ಅನಿಲ ಘಟಕಗಳು ಅಧಿಕಾರಿಗಳ ತಪ್ಪು ತಾಂತ್ರಿಕ ಸಲಹೆಯಿಂದ ವಿಫಲವಾಗಿ, ಇವುಗಳನ್ನು ಹೊಂದಿರುವ ರೈತರು ಸಾಲಗಾರರಾಗಿದ್ದು, ಸಾಲ ಮನ್ನಾ ಮಾಡಲು ಅನೇಕ ಸಲ ವಿನಂತಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ಹಾಗಿದ್ದಲ್ಲಿ, ಸಾಲ ಮನ್ನಾ ಮಾಡಲಾಗುವುದೆ.

ಶ್ರೀ ಅಬ್ದುಲ್ ಜಬ್ಬಾರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಚಕ್ಪೋಸ್ಟ್ ಮಂತ್ರಿಗಳು).—

ಅ) ಬಂದಿದೆ.

ಆ) ಇದಕ್ಕೆ ಅವಕಾಶವಿಲ್ಲ. ಆದರೆ ಸ್ಥಾವರಗಳನ್ನು ದುರಸ್ತಿ ಮಾಡಿಸಿ ಕೊಡಲಾಗುವುದು.

ಶ್ರೀ ಸಿ.ಎಂ. ಉದಾಸಿ.—ಅಧ್ಯಕ್ಷರೆ, ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುವುದು ಏನೆಂದರೆ, ಬಯೋಗ್ಯಾಸ್‌ಗಳನ್ನು ತಯಾರು ಮಾಡಬೇಕಾದಾಗ ತಾಂತ್ರಿಕ ಸಲಹೆಯನ್ನು ತಪ್ಪು ಕೊಟ್ಟಿರುವುದರಿಂದ, ಆಗಿರುವ ಹಾನಿಗೆ ಈ ಫಲಾನುಭವಿಗಳೇ ಜವಾಬ್ದಾರಿ ಎಂದು ಮಾಡುವುದಾದರೆ ಕಷ್ಟವಾಗುತ್ತದೆ. ಏಕೆಂದರೆ, ಇದನ್ನು ರಿಪೇರಿ ಮಾಡಿಸಿಕೊಡಲಿಕ್ಕೂ ಸಾಧ್ಯವಿಲ್ಲ ಎನ್ನುವುದು ಅನೇಕ ಸಲ ಕಂಡುಬಂದಿರುವುದರಿಂದ ಆ ಸಾಲವನ್ನು ಮನ್ನಾ ಮಾಡುವುದು ಸೂಕ್ತ ಎಂದು ನಾನು ಭಾವಿಸಿಕೊಂಡಿದ್ದೇನೆ. ಇಲ್ಲದೇ ಹೋದರೆ ಆ ಸಾಲದ ಹೊರೆ ಅವರಿಗೆ ಆಗುತ್ತದೆ. ರಾಜ್ಯದಲ್ಲಿ ಒಟ್ಟು ಒಂದು ಸಾವಿರ ಅಥವಾ ಒಂದು ಸಾವಿರದ ಎರಡುನೂರು ಇರಬಹುದು ಧಾರವಾಡ ಜಿಲ್ಲೆಯಲ್ಲಿ ೨೩೫ ಜನರಿಗೆ ಈ ಸಾಲದ ಹೊರೆಯಾಗಿದೆ. ಇದರಿಂದ ಏನೂ ಪ್ರಯೋಜನ ಆಗುವುದಿಲ್ಲ, ರಿಪೇರಿಗೂ ಸಾಧ್ಯವಿಲ್ಲ ಎಂದು ಕಂಡುಬಂದಿರುವುದರಿಂದ ಮಾನ್ಯ ಸಚಿವರಲ್ಲಿ ನಾನು ವಿನಂತಿಸಿಕೊಳ್ಳುವುದು ಏನೆಂದರೆ ತಾವು ಹೇಗಾದರೂ ಮಾಡಿ ಈ ಸಾಲವನ್ನು ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.